ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 31-12-1998.

# *ಈ ಹೊಸ ವರ್ಷದಲ್ಲಿ ಧೈರ್ಯದ ಆಧಾರದ ಮೇಲೆ ಸ್ವಯಂ ಅನ್ನು ಪರಿಶ್ರಮಮುಕ್ತ, ಸದಾ ವಿಜಯಿಯಾಗಿ ಅನುಭವ ಮಾಡಿಕೊಳ್ಳಿರಿ.*

(इस नये वर्ष में हिम्मत के आधार पर स्वयं को मेहनत मुक्त, सदा विजयी अनुभव करो)

ಇಂದು ನವಯುಗದ ರಚಯಿತ ಬಾಪ್‌ದಾದಾರವರು ತನ್ನ ಅತಿ ಸ್ನೇಹಿ, ಸದಾ ಸಹಯೋಗಿ ಹಾಗೂ ಅತಿ ಸಮೀಪ ಮಕ್ಕಳಿಗೆ ನವಯುಗ, ನವ ಜೀವನ ಹಾಗೂ ನವ ವರ್ಷದ ಶುಭಾಶಯಗಳನ್ನು ಕೊಡಲು ಬಂದಿದ್ದಾರೆ. ನಾಲ್ಕಾರು ಕಡೆಯ ಮಕ್ಕಳು ಅತಿ ಸ್ನೇಹದಿಂದ ಹೃದಯದಲ್ಲಿ  ಸಮ್ಮುಖವಾಗಿ ಇಟ್ಟುಕೊಂಡು ಶುಭಾಶಯಗಳನ್ನು ಪಡೆಯುತ್ತಿದ್ದಾರೆ. ಬಾಪ್‌ದಾದಾರವರು ಮಕ್ಕಳ ನವ ವರ್ಷದ ಉತ್ಸಾಹ ಉಲ್ಲಾಸವನ್ನು ನೋಡಿ ಖುಷಿಯಾಗುತ್ತಿದ್ದಾರೆ. ಬಹಳಷ್ಟು ಮಕ್ಕಳು ಭಲೇ ದೂರ ಕುಳಿತಿದ್ದಾರೂ ಅಥವಾ ಸಮೀಪ ಕುಳಿತಿದ್ದಾರೂ ಎಲ್ಲರ ಮನಸ್ಸಿನಲ್ಲಿ ಇದೆ ಉತ್ಸಾಹ ಉಲ್ಲಾಸವಿದೆ- ಈ ವರ್ಷದಲ್ಲಿ ನವೀನತೆಯನ್ನು ಮಾಡಿ ತೋರಿಸುತ್ತೇವೆ. ಸ್ವಯಂನ ಪರಿವರ್ತನೆಯಲ್ಲಾಗಿರಲಿ, ಅಥವಾ ಸೇವೆಯ ಸಫಲತೆಯಲ್ಲಾಗಿರಲಿ, ಪ್ರತಿಯೊಂದು ಆತ್ಮನಿಗೂ ಶುಭ ಭಾವನೆ, ಶುಭಕಾಮನೆಯ ಮುಖಾಂತರ ಪರಿವರ್ತನೆ ಮಾಡುವುದರಲ್ಲಿ ಉಲ್ಲಾಸವು ಚೆನ್ನಾಗಿದೆ, ಉತ್ಸಾಹವೂ ಬಹಳ ಚೆನ್ನಾಗಿದೆ, ಜೊತೆ-ಜೊತೆ ಧೈರ್ಯ(ಸಾಹಸ)ವು ಯಥಾಶಕ್ತಿ ಇದೆ. ಬಾಪ್‌ದಾದಾರವರು ಇಂತಹ ಧೈರ್ಯವಂತ ಮಕ್ಕಳ ಒಂದು ಸಂಕಲ್ಪದ ಹಿಂದೆ ಪದಮದಷ್ಟು ಸಹಯೋಗವನ್ನು ಅವಶ್ಯವಾಗಿ ಕೊಡುತ್ತಾರೆ. ಆದ್ದರಿಂದ ಸದಾ ಧೈರ್ಯದಿಂದ  ಮುಂದುವರೆಯುತ್ತಾ ಹೋಗಿ. ಎಂದೂ ಸಹ ಸ್ವಯಂನ ಪ್ರತಿ ಅಥವಾ ಅನ್ಯರ ಪ್ರತಿ ಧೈರ್ಯವನ್ನು ಕಡಿಮೆ ಮಾಡಿಕೊಳ್ಳಬೇಡಿರಿ. ಏಕೆಂದರೆ ಈ ನವಯುಗ ಧೈರ್ಯ  ಇಡುವುದರಿಂದ ಹಾರುವಂತಹ ಯುಗವಾಗಿದೆ, ವರದಾನಿ ಯುಗವಾಗಿದೆ, ಪುರುಷೋತ್ತಮ ಯುಗವಾಗಿದೆ, ಡೈರೆಕ್ಟ್ ವಿಧಾತನ ಮುಖಾಂತರ ಸರ್ವ ಶಕ್ತಿಗಳನ್ನು ವಾರಸತ್ವವಾಗಿ(ಆಸ್ತಿ) ಸಹಜವಾಗಿ ಪ್ರಾಪ್ತಿ ಮಾಡುವಂತಹ ಯುಗವಾಗಿದೆ, ಆದ್ದರಿಂದ, ಈ ಯುಗದ ಮಹತ್ವವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿ. ಯಾವುದೇ ಕಾರ್ಯವನ್ನು ಪ್ರಾರಂಭ ಮಾಡಿದರೆ ಭಲೆ ಸ್ವಪುರುಷಾರ್ಥವಾಗಿರಲಿ, ವಿಶ್ವ ಸೇವೆಯಾಗಿರಲಿ, ಸದಾ ಧೈರ್ಯ ಹಾಗೂ ಬಾಪ್‌ದಾದಾರವರ  ಸಹಯೋಗದ ಮೂಲಕ ಸ್ವಪುರುಷಾರ್ಥದಲ್ಲಿ ಹಾಗೂ ಸೇವೆಯಲ್ಲಿ ಸಫಲತೆ ನಿಶ್ಚಿತವಾಗಿಯೇ ಇದೆ. ಆಗಲೇ ಬೇಕಾಗಿದೆ. ಅಸಂಭವವೂ ಸಂಭವವಾಗಲೇ ಬೇಕಾಗಿದೆ ಏಕೆಂದರೆ ಈ ಯುಗ ಸಫಲತೆಯ ಯುಗವಾಗಿದೆ. ಅಸಂಭವ ಸಂಭವವಾಗುವ ಯುಗವಾಗಿದೆ. ಆದ್ದರಿಂದ ಆಗುತ್ತದೆಯೋ ಇಲ್ಲವೋ, ಹೇಗಾಗುವುದು, ಇಂತಹ ಪ್ರಶ್ನೆಗಳು ಈ ಯುಗದಲ್ಲಿ  ಬ್ರಾಹ್ಮಣಾತ್ಮರಾದ ನಿಮಗೆ ಬರಲೇಬಾರದು. ಬ್ರಾಹ್ಮಣರ ಜನ್ಮ ಪತ್ರದಲ್ಲಿ, ಸಫಲತೆಯು ಅವರ ಜನ್ಮಸಿದ್ಧ ಅಧಿಕಾರವಾಗಿದೆ. ಅಧಿಕಾರಿ ಆತ್ಮರಿಗೆ ಯೋಚಿಸುವ ಅವಶ್ಯಕತೆಯೇ ಇಲ್ಲ, ವಾರಸತ್ವ ಸಿಗಲೇಬೇಕಾಗಿದೆ.

ಹಾಗಾದರೆ ಹೊಸ ವರ್ಷದಲ್ಲಿ ಈ ವಿಶೇಷ ಸ್ಮೃತಿಯನ್ನು ಇಮರ್ಜ್(ಪ್ರತ್ಯಕ್ಷ) ಮಾಡಿಕೊಳ್ಳಿ- ಎಲ್ಲಾ ಕಡೆಯಿಂದಲೂ ಸಫಲತೆಯು ಶ್ರೇಷ್ಠ ಬ್ರಾಹ್ಮಣಾತ್ಮನಾದ ನನ್ನ ಅಧಿಕಾರವಾಗಿದೆ. ಈ ನಿಶ್ಚಯದಿಂದ, ಆತ್ಮಿಕ ನಶೆಯಲ್ಲಿ ಹಾರುತ್ತಾ ಹೋಗಿರಿ. (ಅಭಿಮಾನದ ನಶೆಯಲ್ಲ, ಆತ್ಮಿಕ ನಶೆ) ನಿಶ್ಚಯ ಬುದ್ಧಿಯವರು ಸದಾ ಪ್ರತಿಯೊಂದು ಕಾರ್ಯದಲ್ಲಿ ವಿಜಯಿಯಾಗಿಯೇ ಇರುತ್ತಾರೆ. ಇಂತಹ ನಿಶ್ಚಯ ಬುದ್ಧಿ ಬ್ರಾಹ್ಮಣ ಆತ್ಮರ ಮಸ್ತಕದಲ್ಲಿ ವಿಜಯದ ಅದೃಷ್ಟ ರೇಖೆ ಸದಾ ಇದ್ದೇ ಇರುತ್ತದೆ. ವಿಜಯದ ತಿಲಕ ಸದಾ ಮಸ್ತಕದಲ್ಲಿ ಹೊಳೆಯುತ್ತಾ ಇರುತ್ತದೆ. ಆದ್ದರಿಂದ ಈ ವರ್ಷವನ್ನು ಸದಾ ವಿಜಯೀ ವರ್ಷವನ್ನಾಗಿ ಅನುಭವ ಮಾಡುತ್ತಾ ನಡೆಯಿರಿ. ಇಂತಹ ನಿಶ್ಚಯ ಹಾಗೂ ನಶೆ ಇದೆಯೇ? ಡಬಲ್ ವಿದೇಶಿಯರಿಗೆ ಇದೆಯೇ? ಡಬಲ್ ವಿದೇಶಿಯರು ಬುದ್ಧಿವಂತರಾಗಿದ್ದಾರೆ. (ಎಲ್ಲರೂ ಕೈ ಅಲುಗಾಡಿಸಿದರು) ಬಹಳ ಒಳ್ಳೆಯದು. ತಿಲಕ ಕಾಣಿಸುತ್ತಿದೆ. ಹಾಗೂ ಭಾರತ ವಾಸಿಯರಂತೂ ಅದೃಷ್ಟ(ಭಾಗ್ಯ)ವಂತರಾಗಿಯೇ ಇದ್ದಾರೆ, ಏಕೆ? ಭಾರತದ ಧರಣಿಯೇ ಭಾಗ್ಯವಂತವಾಗಿದೆ. ಆದ್ದರಿಂದ ವಿದೇಶಿಯರಾಗಿರಲಿ, ಭಾರತ ವಾಸಿಗಳಾಗಿರಲಿ ಇಬ್ಬರೂ ಭಾಗ್ಯ ವಿಧಾತನ ಮಕ್ಕಳಾಗಿದ್ದಾರೆ ಆದ್ದರಿಂದ ಪ್ರತಿ ಬ್ರಾಹ್ಮಣ ಮಗು ವಿಜಯೀ ಆಗಿದೆ. ಕೇವಲ ಧೈರ್ಯವನ್ನು ಪ್ರತ್ಯಕ್ಷ ಮಾಡಿಕೊಳ್ಳಿ. ತುಂಬಾ ಧೈರ್ಯವಿದೆಯಲ್ಲವೇ, ಏಕೆಂದರೆ ಮಾಸ್ಟರ್ ಸರ್ವ ಶಕ್ತಿವಂತರಾಗಿದ್ದೀರಿ. ಆಗಿದ್ದೀರಲ್ಲವೇ? (ಎಲ್ಲರೂ ಕೈ ಅಲುಗಾಡಿಸಿದರು) ಕೈಯಂತೂ ಬಹಳ ಚೆನ್ನಾಗಿ ಅಲುಗಾಡಿಸುತ್ತೀರಿ. ಈಗ ಮನಸ್ಸಿನಿಂದಲೂ ಸಹ ಸದಾ ಧೈರ್ಯದ ಕೈಯನ್ನು ಅಲುಗಾಡಿಸುತ್ತಾ ಇರಿ. ಬಾಪ್‌ದಾದಾರವರಿಗೆ ಖುಷಿಯಿದೆ, ಹೆಮ್ಮೆ ಇದೆ- ನನ್ನ ಒಂದೊಂದು ಮಗು ಅನೇಕ ಬಾರಿಯ ವಿಜಯಿಯಾಗಿದ್ದಾರೆ. ಒಂದು ಸಲ ಅಲ್ಲ, ಅನೇಕ ಬಾರಿಯ ವಿಜಯಿ ಆತ್ಮರಾಗಿದ್ದೀರಿ. ಎಂದ ಮೇಲೆ ಎಂದೂ ಸಹ ಈ ರೀತಿ ಯೋಚಿಸಬೇಡಿ, ಗೊತ್ತಿಲ್ಲ ಏನಾಗುವುದೋ? ಈ ಶಬ್ದವನ್ನು ತರಬೇಡಿ. ವಿಜಯೀ ಆಗಿದ್ದೀರಿ ಹಾಗೂ ಸದಾ ಆಗಿರುತ್ತೀರಿ. ಎಲ್ಲರೂ ಪಕ್ಕಾ ಆಗಿದ್ದೀರಾ? ಒಳ್ಳೆಯದು ಈಗ ಅಲ್ಲಿ ಹೋಗಿ ಮತ್ತೆ ಬಲಹೀನ ಸಮಾಚಾರವನ್ನು ಬರೆಯಬಾರದು- ದಾದೀಯರೆ, ಬಾಬಾ, ಮಾಯೆ ಬಂದು ಬಿಟ್ಟಿತು, ಈ ರೀತಿ ಬರೆಯಬಾರದು. ಮಾಯಾಜೀತ್ ಆಗಿರುವಿರಿ. ನಾವು ಆಗದಿದ್ದರೆ ಮತ್ತೆ ಯಾರು ಆಗುವವರು, ಈ ಆತ್ಮಿಕ ನಶೆಯನ್ನು ಪಕ್ಕಾ ಮಾಡಿಕೊಳ್ಳಿ. ಬೇರೆ ಬೇರೆ ಕಾರ್ಯಗಳಲ್ಲಿ ಮನಸ್ಸು ಹಾಗೂ ಬುದ್ಧಿ ವ್ಯಸ್ತವಾಗಿ ಬಿಟ್ಟರೆ ನಶೆ ಗುಪ್ತವಾಗಿ ಹೋಗುತ್ತದೆ. ಆದರೆ ಮಧ್ಯ ಮಧ್ಯದಲ್ಲಿ ಚೆಕ್(ಪರಿಶೀಲನೆ) ಮಾಡಿಕೊಳ್ಳಿ- ಕರ್ಮ ಮಾಡುತ್ತಲೂ ಸಹ ಈ ವಿಜಯೀತನದ ಆತ್ಮಿಕ ನಶೆ ಇದೆಯೇ? ..ನಿಶ್ಚಯವಿದ್ದರೆ ನಶೆ ಅವಶ್ಯವಾಗಿ ಇರುತ್ತದೆ. ನಿಶ್ಚಯದ ಚಿಹ್ನೆಯು ನಶೆಯಾಗಿದೆ ಹಾಗೂ ನಶೆ ಇದ್ದಲ್ಲಿ ಅವಶ್ಯವಾಗಿ ನಿಶ್ಚಯವಿರುತ್ತದೆ. ಎರಡಕ್ಕೂ ಸಂಬಂಧವಿದೆ. ಆದ್ದರಿಂದ ಈಗ 99 ರಲ್ಲಿ ತಮ್ಮ ನಶೆಯನ್ನು ಸದಾ ಪ್ರತ್ಯಕ್ಷವಾಗಿ ಇಟ್ಟುಕೊಳ್ಳಿ, ಆಗ ಅನುಭವವಾಗುವುದು. ತಪ್ಪು ಆಗುವುದಿಲ್ಲ, ಪರಿಶ್ರಮವೆನಿಸುವುದಿಲ್ಲ. ಬಾಪ್‌ದಾದಾರವರು ಮೊದಲು ಸಹ ತಿಳಿಸಿದ್ದರು- ಯಾವಾಗ ಬಾಪ್‌ದಾದಾರವರು ಮಕ್ಕಳು ಪರಿಶ್ರಮ ಪಡುತ್ತಿರುವುದನ್ನು ನೋಡುತ್ತಾರೆ, ಯುದ್ಧ ಮಾಡುತ್ತಿರುವುದನ್ನು ನೋಡುತ್ತಾರೆಯೋ, ಆಗ ಮಕ್ಕಳು ಪರಿಶ್ರಮ ಪಡುತ್ತಿರುವುದು ತಂದೆಗೆ ಇಷ್ಟವಾಗುವುದಿಲ್ಲ ಆದ್ದರಿಂದ ಈ ನವ ವರ್ಷವನ್ನು ಹೇಗೆ ಆಚರಿಸುವಿರಿ? ಮುಕ್ತಿ ವರ್ಷವನ್ನಾಗಿ ಆಚರಿಸಬೇಕು. ನಕಾರಾತ್ಮಕತೆಯನ್ನು, ವ್ಯರ್ಥವನ್ನು ಸಮಾಪ್ತಿ ಮಾಡಿ ಆಗ ಈ ವರ್ಷ ಸ್ವತಹವಾಗಿ ಪರಿಶ್ರಮ ಮುಕ್ತ ವರ್ಷವಾಗಿ ಬಿಡುವುದು. ಎಲ್ಲರೂ ಮೋಜಿನಲ್ಲಿ ಇರುವವರು, ಪರಿಶ್ರಮ ಪಡುವವರಲ್ಲ. ಮೋಜು ಚೆನ್ನಾಗಿ ಎನಿಸುತ್ತದೆಯೇ

ಅಥವಾ ಪರಿಶ್ರಮ ಚೆನ್ನಾಗಿ ಎನಿಸುತ್ತದೆ? ಮೋಜು ಇಷ್ಟವಾಗುತ್ತದೆ ಅಲ್ಲವೇ? ಅಂದ ಮೇಲೆ ಈ ವರ್ಷ ಮನಸ್ಸಿನಲ್ಲಿ, ಸಂಕಲ್ಪದಲ್ಲಿಯೂ ಸಹ ಪರಿಶ್ರಮ ಮುಕ್ತರಾಗಿರಿ.

ಬಾಪ್‌ದಾದಾರವರ ಬಳಿ ಮಕ್ಕಳ ಬಹಳಷ್ಟು ಒಳ್ಳೆಯ ಧೈರ್ಯ ತುಂಬಿರುವಂತಹ ಪತ್ರಗಳು ಹಾಗೂ ಚೀಟಿಗಳು ಬಂದಿವೆ- ನಾವು ಈಗಿನಿಂದ 108ರ ಮಾಲೆಯಲ್ಲಿ ಅವಶ್ಯವಾಗಿ ಬರುತ್ತೇವೆ, ಬಹಳಷ್ಟು ಮಕ್ಕಳ ಒಳ್ಳೊಳ್ಳೆಯ ಉತ್ಸಾಹದ ಪತ್ರಗಳು ಸಹ ಬಂದಿವೆ ಹಾಗೂ ಆತ್ಮಿಕ ವಾರ್ತಾಲಾಪದಲ್ಲಿಯೂ ಸಹ ಬಹಳ ಜನ ಬಾಪ್‌ದಾದಾರವರಿಗೆ ತಮ್ಮ ನಿಶ್ಚಯ ಹಾಗೂ ಧೈರ್ಯದ ಒಳ್ಳೆಯ ಸಮಾಚಾರವನ್ನು ಕೊಟ್ಟಿದ್ದಾರೆ. ಬಾಪ್‌ದಾದಾರವರು ಇಂತಹ ಮಕ್ಕಳಿಗೆ  ನಿಮ್ಮೆಲ್ಲರ ಕಳೆದು ಹೋದದ್ದಕ್ಕೆ( ಭೂತಕಾಲಕ್ಕೆ) ಬಾಪ್‌ದಾದಾರವರು ಬಿಂದುವನ್ನು ಇಟ್ಟಿದ್ದಾರೆ. ಆದ್ದರಿಂದ ಕಳೆದು ಹೋದದ್ದನ್ನು ಯೋಚಿಸಬೇಡಿ, ಈಗ ಯಾವ ಧೈರ್ಯವನ್ನು ಇಟ್ಟಿದ್ದೀರೋ, ಆ ಧೈರ್ಯ ಹಾಗೂ ಸಹಯೋಗದಿಂದ ಮುಂದುವರೆಯುತ್ತಾ ಹೋಗಿ ಎಂದು ಹೇಳುತ್ತಾರೆ. ನವ ವರ್ಷದ ಹೊಸ ಉತ್ಸಾಹವನ್ನು  ಸಹ ಬಹಳ ಚೆನ್ನಾಗಿ ಬರೆದಿದ್ದೀರಿ ವಿದೇಶದ ಮಕ್ಕಳಾಗಿರಲಿ, ದೇಶದ ಮಕ್ಕಳಾಗಿರಲಿ, ಬಾಪ್‌ದಾದಾರವರು ಇಂತಹ ಮಕ್ಕಳಿಗೆ ಇದೇ ವರದಾನವನ್ನು ಕೊಡುತ್ತಾರೆ- ಇದೇ ಧೈರ್ಯದಲ್ಲಿ, ನಿಶ್ಚಯದಲ್ಲಿ, ನಶೆಯಲ್ಲಿ ಅಮರ ಭವ. ಅಮರರಾಗಿರುತ್ತೀರಿ ಅಲ್ಲವೇ! ಡಬಲ್ ವಿದೇಶಿಯರು ಅಮರರಾಗಿರುತ್ತೀರಾ? ಭಾರತವಾಸಿಯರು ಆಗುತ್ತೀರಲ್ಲವೇ? ಭಾರತದೇಶವಂತೂ ನಂಬರ್ ತೆಗೆದುಕೊಳ್ಳಲೇಬೇಕು.

ನವ ವರ್ಷವನ್ನು ಹೇಗೆ ಆಚರಿಸುತ್ತೀರಿ? ಒಂದಂತೂ ಉಡುಗೊರೆಯನ್ನು ಕೊಡುತ್ತೀರಿ ಹಾಗೂ ಶುಭಾಶಯಗಳನ್ನು ಕೊಡುತ್ತಾರೆ. ಬಹಳಷ್ಟು ಸಿಹಿ ತಿನ್ನಿಸುತ್ತಾರೆ. ಬಹಳ ಹಾಡುತ್ತಾರೆ ಕುಣಿಯುತ್ತಾರೆ. ಹಾಗಾದರೆ ನೀವು 12ರ ನಂತರ ಕೇವಲ ಒಂದು ದಿನ ಹೊಸ ವರ್ಷ ಆಚರಿಸುವುದಲ್ಲ ಆದರೆ ಬ್ರಾಹ್ಮಣ ಮಕ್ಕಳಿಗಾಗಿ ಈ ನವಯುಗದಲ್ಲಿ ಪ್ರತಿ ಗಳಿಗೆ ಹೊಸದಾಗಿದೆ, ಪ್ರತಿಯೊಂದು ಶ್ವಾಸ ಹೊಸದಾಗಿದೆ, ಪ್ರತಿಯೊಂದು ಸಂಕಲ್ಪ ಹೊಸದಾಗಿದೆ, ಆದ್ದರಿಂದ ಸದಾ ಇಡೀ ವರ್ಷ, ಒಂದು ದಿನವಲ್ಲ, ಒಂದು ವಾರವಲ್ಲ, ಒಂದು ತಿಂಗಳಲ್ಲ, ನಾಲ್ಕು ತಿಂಗಳು ಅಲ್ಲ, ಎಂಟು ತಿಂಗಳಲ್ಲ, 12 ತಿಂಗಳು ಸದಾ ಪರಸ್ಪರ ದಿಲ್ ಖುಷ್ ಮಿಠಾಯಿಯನ್ನು ಹಂಚುತ್ತಿರಿ. ಹಂಚುತ್ತೀರಲ್ಲವೇ? ದಿಲ್ ಖುಷ್ ಮಿಠಾಯಿಯನ್ನು ಹಂಚಲು ಬರುತ್ತದೆಯೇ? ಎಲ್ಲರೂ ಬುದ್ಧಿವಂತರಾಗಿದ್ದಾರೆ. ಹಾಗಾದರೆ ದಿಲ್ ಖುಷ್ ಮಿಠಾಯಿಯನ್ನು ಹಂಚಿರಿ. ಯಾರು ಸಹ ನಿಮ್ಮ ದಿಲ್ ಖುಷ್ ಮಿಠಾಯಿಯನ್ನು ತನ್ನ ಸ್ವಭಾವದ ಕಾರಣ, ಸಂಸ್ಕಾರದ ಕಾರಣ, ಸಮಸ್ಯೆಯ ಕಾರಣ ಒಂದುವೇಳೆ ಸ್ವೀಕಾರ ಮಾಡದೇ  ಇದ್ದರೆ ನೀವು ಬಲಹೀನರಾಗಬೇಡಿ. ನೀವು ಹಂಚಿದಿರಿ, ನಿಮ್ಮ ಆಜ್ಞಾಕಾರಿ ಆಗುವ ಚಾರ್ಟ್ ಬಾಪ್‌ದಾದಾರವರ ಬಳಿ ಜಮಾ ಆಗಿ ಹೋಯಿತು. ಈ ರೀತಿ ಯೋಚಿಸಬೇಡಿ ನಾನು ದಿಲ್ ಖುಷ್ ಮಿಠಾಯಿಯನ್ನು ತಿನ್ನಿಸಿದೆ ಆದರೆ ಇವರಂತೂ ಕೋಪ ಮಾಡಿಕೊಂಡರು, ಯಾವುದೇ ತೊಂದರೆ ಇಲ್ಲ, ಅವರು ರಹಸ್ಯವನ್ನು ತಿಳಿದುಕೊಂಡಿಲ್ಲ ಆದ್ದರಿಂದ ಕೋಪ ಮಾಡಿಕೊಂಡರು. ನೀವಂತೂ ರಹಸ್ಯವನ್ನು ತಿಳಿದುಕೊಂಡಿದ್ದೀರಿ ಅಲ್ಲವೇ! ಎಂದ ಮೇಲೆ ಈ ರಹಸ್ಯವನ್ನು ಸಹ ತಿಳಿದುಕೊಳ್ಳಿ- ಇವರು ಲೆಕ್ಕಾಚಾರ ಹಾಗೂ ಸಮಸ್ಯೆಗೆ ವಶರಾಗಿದ್ದಾರೆ. ನೀವು ಆಜ್ಞಾಕಾರಿಯಾಗಿರಿ, ಸರಿಯೇ? ಆಜ್ಞಾಕಾರಿಯಾಗಬೇಕು, ಇದಕ್ಕಂತೂ ಎಲ್ಲರೂ ಚೆನ್ನಾಗಿ ಸರಿ ಎಂದು ಹೇಳುತ್ತೀರಿ, ಒಂದು ವೇಳೆ ನೀವು ಇಲ್ಲಿ ನೋಡಿದರೆ, ಕೈಯನ್ನು ಸಹ ಚೆನ್ನಾಗಿ ಅಲುಗಾಡಿಸುತ್ತೀರಿ, ಖುಷಿ ಪಡಿಸುತ್ತೀರಿ, ಕುತ್ತಿಗೆಯನ್ನು ಅಲುಗಾಡಿಸುತ್ತೀರಿ, ಕೈಯನ್ನು

ಅಲುಗಾಡಿಸುತ್ತೀರಿ. ಆದರೂ ಸಹ ಬಾಪ್‌ದಾದಾರವರು ಪ್ರತಿಯೊಂದು ಮಗುವಿನ ಮೇಲೆ ಸದಾ ಖುಷಿಯಾಗಿರುತ್ತಾರೆ. ಯಾವಾಗ ನನ್ನ ಮಗು ಎಂದು ಹೇಳಿಬಿಟ್ಟರೋ, ಯಾರೇ ಆಗಿರಲಿ, ಹೇಗೆ ಇರಲಿ, ತಂದೆಯು ನೋಡಿ ಖುಷಿಯನ್ನೇ ಪಡುತ್ತಾರೆ. ಬಾಬಾರವರು ಯಾವ ಪ್ರತಿಜ್ಞೆಯನ್ನು ಮಾಡಿದ್ದಾರೆ- ಹೇಗಾದರೂ ಯೋಗ್ಯರನ್ನಾಗಿ ಮಾಡಿ ಜೊತೆಯಲ್ಲಿ ಕರೆದುಕೊಂಡು ಹೋಗಲೇಬೇಕು. ಜೊತೆಯಲ್ಲಿ ನಡೆಯಬೇಕಲ್ಲವೇ? ಜೊತೆಯಲ್ಲಿ ಹೋಗುವುದಕ್ಕಾಗಿ ತಯಾರಾಗಿದ್ದೀರಾ? ಎಲ್ಲರೂ ತಯಾರಾಗಿದ್ದೀರಾ? ಎವೆರ್ರೆಡಿ (ಸದಾ ತಯಾರು) ಆಗಿದ್ದೀರಾ? ಒಳ್ಳೆಯದು, ಎವೆರೆಡಿ ಆಗಿದ್ದೀರಿ, ಬಹಳ ಒಳ್ಳೆಯದು. ಎವರ್ ಹ್ಯಾಪಿ (ಸದಾ ಹರ್ಷಿತ) ಸಹ ಆಗಿದ್ದೀರಾ? ಯಾವಾಗ ಮಾಯೆ ಬಂದು ಬಿಡುತ್ತೆದೆಯೋ ಆಗ? ಆಗ ಸ್ವಲ್ಪ ಸ್ವಲ್ಪ ಮನಸ್ಸಿನಲ್ಲಿ ಕಿರುಚಾಡುತ್ತೀರಾ? ಬಾಬಾ ಮಾಯೆ ಬಂದುಬಿಟ್ಟಿತು, ಬಂದು ಬಿಟ್ಟಿತು. ಕಿರುಚಾಡಬಾರದು, ತಮ್ಮನ್ನು ಹಾರಿಸಬೇಕು. ಮಾಯೆ ಕೆಳಗಡೆಯೇ ಉಳಿದುಕೊಂಡು ಬಿಡಬೇಕು, ನೀವು ಮೇಲೆ ಹಾರಿ ಹೋಗಬೇಕು ಆಗ ಮಾಯೆ ನೋಡುತ್ತಲೇ ಉಳಿದುಕೊಂಡು ಬಿಡುತ್ತದೆ. ಒಳ್ಳೆಯದು. ಖುಷಿಯಲ್ಲಿ ನೃತ್ಯ ಮಾಡುತ್ತಾ ಇರಿ ಹಾಗೂ ದಿಲ್ ಖುಷ್ ಮಿಠಾಯಿಯನ್ನು ಹಂಚುತ್ತಲೂ ಇರಿ. ಜೊತೆಯಲ್ಲಿ ಯಾರೇ ಸಂಬಂಧ -ಸಂಪರ್ಕದಲ್ಲಿ ಬಂದರೆ ಅವರಿಗೆ ಯಾವುದಾದರೂ ಒಂದು ಉಡುಗೊರೆಯನ್ನು ಕೊಡಿ, ಯಾರು ಸಹ ಖಾಲಿ ಕೈಯಲ್ಲಿ ಹೋಗದಿರಲಿ, ಯಾವ ಉಡುಗೊರೆಯನ್ನು ಕೊಡುವಿರಿ? ನಿಮ್ಮ ಬಳಿ ಉಡುಗೊರೆಗಳಂತೂ ಬಹಳ ಇದೆ. ಉಡುಗೊರೆಗಳ ಸ್ಟಾಕ್ ( ಜಮಾ) ಇದೆಯೇ? ಎಂದ ಮೇಲೆ ಕೊಡುವುದರಲ್ಲಿ ಗೊಂದಲದಲ್ಲಿ ಬರಬೇಡಿ, ಕೊಡುತ್ತಾ ಹೋಗಿ. ಉದಾರ ಹೃದಯದವರಾಗಿ, ಕೆಲವರಿಗೆ ಶಕ್ತಿಯ ಸಹಾಯ ಕೊಡಿ, ಶಕ್ತಿಯ ಪ್ರಕಂಪನಗಳನ್ನು ಕೊಡಿ, ಕೆಲವರಿಗೆ ಗುಣಗಳ ಉಡುಗೊರೆ ಕೊಡಿ. ಮುಖದಿಂದ ಅಲ್ಲ ಆದರೆ ತಮ್ಮ ಚಹರೆ(ಮುಖ) ಹಾಗೂ ಚಲನೆಯಿಂದ(ನಡವಳಿಕೆ) ಕೊಡಿ. ಒಂದು ವೇಳೆ ಯಾವುದೇ ಗುಣ ಅಥವಾ ಶಕ್ತಿ ಇಲ್ಲದೇ ಇದ್ದರೂ ಸಹ ಕನಿಷ್ಟ ಪಕ್ಷ ಚಿಕ್ಕದೊಂದು ಉಡುಗೊರೆಯನ್ನು ಕೊಡಿ, ಅದು ಯಾವುದಾಗಿದೆ? ಶುಭ ಭಾವನೆ ಹಾಗೂ ಶುಭಕಾಮನೆಯ ಉಡುಗೊರೆ. ಶುಭಕಾಮನೆಯನ್ನು ಮಾಡಿ- ಇವರು ನನ್ನ ಅಗಲಿ ಹೋಗಿ ಮರಳಿ ಸಿಕ್ಕಿರುವ ಸಹೋದರ ಅಥವಾ ಸಹೋದರಿಯಾಗಿದ್ದಾರೆ, ಅಗಲಿ ಹೋಗಿ ಮರಳಿ ಸಿಕ್ಕಿದ್ದಾರೆ ಎಂದು ಯೋಚಿಸಿದರೆ ಅಶುಭ ಭಾವನೆಯಿಂದ ಶುಭ ಭಾವನೆ ಬಂದುಬಿಡುತ್ತದೆ. ಈ ಸಹೋದರ ಸಹೋದರಿಯದ್ದು ಸಹ ಹಾರುವ ಕಲೆಯ ಪಾತ್ರವಾಗಿ ಬಿಡಲಿ, ಇದಕ್ಕಾಗಿ ಸಹಯೋಗ ಹಾಗೂ ಶುಭ ಭಾವನೆ ಇದೆ. ಕೆಲವು ಮಕ್ಕಳು ಹೇಳುತ್ತಾರೆ- ನಾವು ಕೊಡು-ತೆಗೆದುಕೊಳ್ಳುವುದು ಮಾಡುವುದಿಲ್ಲ ಎಂದು. ಒಳ್ಳೆಯದು ಶುಭ ಭಾವನೆಯನ್ನು ತೆಗೆದುಕೊಳ್ಳುವುದಿಲ್ಲ, ಏನಾದರೂ ಕೊಡುತ್ತೀರಿ ಅಲ್ಲವೇ. ಭಲೇ ಅಶುಭ ಮಾತನ್ನೇ ನಿಮಗೆ ಕೊಡಲಿ, ಅಶುಭ ಪ್ರಕಂಪನಗಳನ್ನು(ತರಂಗ) ಕೊಡಲಿ, ಅಶುಭ ಚಲನೆ ನಡೆಯಲಿ ಆದರೆ ನೀವು ಯಾರಾಗಿದ್ದೀರಿ? ನಿಮ್ಮ ಆಕ್ಯುಪೇಶನ್(ಉದ್ಯೋಗ) ಏನಾಗಿದೆ? ವಿಶ್ವ ಪರಿವರ್ತಕರಾಗಿದ್ದೀರಾ? ನಿಮ್ಮ ಕೆಲಸ ಏನಾಗಿದೆ? ವಿಶ್ವ ಪರಿವರ್ತಕರಾಗಿದ್ದೀರಲ್ಲವೇ! ಹಾಗಾದರೆ ವಿಶ್ವವನ್ನು ಪರಿವರ್ತನೆ ಮಾಡುವಿರಿ ಹಾಗೂ ಒಂದುವೇಳೆ ಅವರು ನಿಮಗೆ ಉಲ್ಟಾ ಮಾತುಗಳನ್ನು ಆಡಿದರೂ, ಉಲ್ಟಾ ನಡವಳಿಕೆಯಿಂದ ನಡೆದರು ಎಂದಿಟ್ಟುಕೊಳ್ಳಿ, ಅದನ್ನು ಪರಿವರ್ತನೆ ಮಾಡಲು ಸಾಧ್ಯವಿಲ್ಲವೇ? ಸಕಾರಾತ್ಮಕ ರೂಪದಲ್ಲಿ ಪರಿವರ್ತನೆ ಮಾಡಲು ಸಾಧ್ಯವಿಲ್ಲವೇ? ನಕಾರಾತ್ಮಕತೆಯನ್ನು ನಕಾರಾತ್ಮಕತೆಯಾಗಿ ಧಾರಣೆ ಮಾಡುವಿರೇ ಅಥವಾ ನಕಾರಾತ್ಮಕತೆಯನ್ನು ಸಕಾರಾತ್ಮಕತೆಯಲ್ಲಿ ಪರಿವರ್ತನೆ ಮಾಡಿ ನೀವು ಪ್ರತಿಯೊಬ್ಬರಿಗೂ ಶುಭ ಭಾವನೆ, ಶುಭಕಾಮನೆಯ ಉಡುಗೊರೆಯನ್ನು ಕೊಡಬೇಕು. ಶುಭ ಭಾವನೆಯ ಸ್ಟಾಕ್ ಸದಾ

ಜಮಾ ಮಾಡಿ ಇಟ್ಟುಕೊಳ್ಳಿ. ನೀವು ಕೊಡುತ್ತಾ ಇರಿ. ಪರಿವರ್ತನೆ ಮಾಡಿಕೊಳ್ಳಿ. ಆಗ ನಿಮ್ಮ ಟೈಟಲ್ ವಿಶ್ವ ಪರಿವರ್ತಕ ಅದು ಪ್ರ್ಯಾಕ್ಟಿಕಲ್ನಲ್ಲಿ ಬಳಕೆಯಾಗುತ್ತಾ ಹೋಗುತ್ತದೆ. ಹಾಗೂ ಈ ಮಾತನ್ನು ಸರಿಯಾಗಿ ತಿಳಿದುಕೊಳ್ಳಿರಿ- ಯಾರು ಸದಾ ಪ್ರತಿಯೊಬ್ಬರನ್ನು ಪರಿವರ್ತನೆ ಮಾಡಿ ತನ್ನ ವಿಶ್ವ ಪರಿವರ್ತನೆಯ ಕಾರ್ಯವನ್ನು ಸಾಕರದಲ್ಲಿ ತರುತ್ತಾರೆಯೋ, ಅವರೇ ಸಾಕಾರ ರೂಪದಲ್ಲಿ 21 ಜನ್ಮಗಳಿಗಾಗಿ ನಿಶ್ಚಿತವಾದ ರಾಜ್ಯಾಧಿಕಾರಿಯಾಗುತ್ತಾರೆ. ಸಿಂಹಾಸನದ ಮೇಲೆ ಭಲೆ ಒಂದೇ ಬಾರಿ ಕುಳಿತುಕೊಳ್ಳುತ್ತಾರೆ ಆದರೆ ಪ್ರತಿಯೊಂದು ಜನ್ಮದಲ್ಲಿ ರಾಜ ಪರಿವಾರದಲ್ಲಿ, ರಾಜ್ಯಾಧಿಕಾರಿ ಆತ್ಮರ ಸಮೀಪ ಸಂಬಂಧದಲ್ಲಿ ಇರುತ್ತಾರೆ. ವಿಶ್ವ ಪರಿವರ್ತಕರೇ ವಿಶ್ವ ರಾಜ್ಯಾಧಿಕಾರಿ ಆಗುತ್ತಾರೆ ಆದ್ದರಿಂದ ಸದಾ ತಮ್ಮ ಈ ಉದ್ಯೋಗವನ್ನು ನೆನಪಿಟ್ಟುಕೊಳ್ಳಿರಿ- ನನ್ನ ಕರ್ತವ್ಯವೇ ಪರಿವರ್ತನೆ ಮಾಡುವುದಾಗಿದೆ. ದಾತನ ಮಕ್ಕಳಾಗಿದ್ದೀರಿ ಎಂದ ಮೇಲೆ ದಾತಾ ಆಗಿ ಕೊಡುತ್ತಾ ಹೋಗಿ, ಆಗಲೇ ಭವಿಷ್ಯದಲ್ಲಿ ಕೈಯಿಂದ ಯಾರಿಗೂ ಕೊಡುವುದಿಲ್ಲ ಆದರೆ ಸದಾ ನಿಮ್ಮ ರಾಜ್ಯದಲ್ಲಿ ಪ್ರತಿ ಆತ್ಮ ಸಂಪನ್ನವಾಗಿರುತ್ತದೆ, ಇದು ಈ ಸಮಯದಲ್ಲಿನ ದಾತಾ ಆಗಿರುವ ಪ್ರಾಲಬ್ದವಾಗಿದೆ. ಆದ್ದರಿಂದ ಲೆಕ್ಕ ಮಾಡಬೇಡಿ, ಇವರು ಇದನ್ನು ಮಾಡಿದರು, ಇಷ್ಟು ಬಾರಿ ಮಾಡಿದರು, ಮಾಸ್ಟರ್ ದಾತಾ ಆಗಿ ಉಡುಗೊರೆಯನ್ನು(ಬಹುಮಾನ) ಕೊಡುತ್ತಾ ಹೋಗಿರಿ. ಹಾಗೂ ಯಾವ ಶುಭಾಶಯಗಳನ್ನು ಕೊಡುವಿರಿ? ನೋಡಿ ಯಾರಿಗಾದರೂ, ಯಾವುದೇ ಪ್ರಾಪ್ತಿ ಆಗುತ್ತದೆ ಎಂದರೆ ಅವರ ಮುಖದಿಂದ, ಮನಸ್ಸಿನಿಂದ ಇದೇ ಶಬ್ದ ಬರುತ್ತದೆ- ನಿಮಗೆ ಶುಭಾಶಯಗಳು ಎಂದು, ಪರಸ್ಪರ ಖುಷಿಯನ್ನು ಹಂಚುತ್ತಿದ್ದರೂ ಹೇಳುತ್ತಾರೆ- ಶುಭಾಶಯಗಳು. ಉತ್ಸವವನ್ನು ಆಚರಿಸುತ್ತಿದ್ದರೂ ಹೇಳುತ್ತಾರೆ- ಶುಭಾಶಯಗಳು. ಈ ರೀತಿ ಯಾರೇ ನಿಮ್ಮ ಸಮ್ಮುಖದಲ್ಲಿ ಬಂದರೆ ನಿಮ್ಮ ಬಾಯಿಯಿಂದ ಇಂತಹ ಮಾತನ್ನೇ ಮಾತನಾಡಿರಿ, ಸಂಕಲ್ಪದಲ್ಲಿಯೂ ಇಂತಹ ಶ್ರೇಷ್ಠ ಸಂಕಲ್ಪವೇ ಇದ್ದರೆ, ಯಾರು ನಿಮ್ಮೊಂದಿಗೆ ಭೇಟಿಯಾದರೂ ಅವರು ಪ್ರತಿ ಸಮಯ ಹೃದಯದಿಂದ ಶುಭಾಶಯಗಳು ಹಾಗೂ ಆಶೀರ್ವಾದವನ್ನು ಅವಶ್ಯವಾಗಿ ಕೊಡುವರು. ಹಾಗಾದರೆ ಸದಾ ಇಂತಹ ಮಾತನ್ನು ಆಡಿ, ಇಂತಹ ಸಂಬಂಧ ಸಂಪರ್ಕದಲ್ಲಿ ಬನ್ನಿ ಅವರ ಹೃದಯದಿಂದ, ಮುಖದಿಂದ ಶುಭಾಶಯಗಳು ಹೊರಬರಲಿ ಹಾಗೂ ಆಶಿರ್ವಾದಗಳೇ ಹೊರಬರಲಿ. ಶುಭಾಶಯಗಳ ಯೋಗ್ಯವಿಲ್ಲದಂತಹ ಶಬ್ದಗಳು ಹೊರ ಬರದಿರಲಿ. ಒಂದೊಂದು ಮಾತು ರತ್ನದಂತೆ ಇರಲಿ. ಸಾಧಾರಣ ಮಾತುಗಳಾಗದಿರಲಿ.

ಬಾಪ್‌ದಾದಾರವರು ಇಲ್ಲಿಯವರೆಗೂ ಫಲಿತಾಂಶದಲ್ಲಿ ನೋಡಿದರು- ನಾಳೆಯಂತೂ ಬದಲಾಗುತ್ತದೆ ಆದರೆ ಇಲ್ಲಿಯವರೆಗೂ ನೋಡಿದರು ಮಾತಿನಲ್ಲಿ ಯಾವ ಸಂಯಮ ಹಾಗೂ ಸ್ನೇಹವಿರಬೇಕೋ ಆ ಸ್ನೇಹವೂ ಸಹ ಕಡಿಮೆಯಾಗಿ ಬಿಡುತ್ತದೆ ಹಾಗೂ ಸಂಯಮವು ಸಹ ಕಡಿಮೆಯಾಗುತ್ತದೆ. ಆದ್ದರಿಂದ ರತ್ನದಂತಹ ಮಾತುಗಳನ್ನು ಆಡಿ. ನೀವು ವಜ್ರ ಸಮಾನರಾಗಿದ್ದೀರಿ ಎಂದ ಮೇಲೆ ನಿಮ್ಮ ಮಾತುಗಳು ಸಹ ರತ್ನ ಸಮಾನವಾಗಿರಲಿ. ಈ ರೀತಿ ಮೌಲ್ಯವಂತವಾಗಿರಲಿ. ಸಾಧಾರಣವಾಗಿ ಇರದಿರಲಿ. ಸಾಧಾರಣವೂ ಇರಬಾರದು, ವ್ಯರ್ಥವೂ ಇರಬಾರದು. ಕೆಲವೊಮ್ಮೆ ಬಾಪ್‌ದಾದಾರವರು ನೋಡಿದ್ದಾರೆ, ಫಲಿತಾಂಶವನ್ನು ಹೇಳಲೇ, ಏಕೆಂದರೆ 12 ಗಂಟೆಯ ನಂತರ ಎಲ್ಲವನ್ನೂ ಸಮಾಪ್ತಿ ಮಾಡಬೇಕಲ್ಲವೇ! ಬಾಪ್‌ದಾದಾರವರು ಇದನ್ನು ಸಹ ನೋಡಿದರು- ಕೆಲವು ಮಕ್ಕಳು ಚಿಕ್ಕ ಮಾತನ್ನು ಬಹಳ ವಿಸ್ತಾರ ಮಾಡುತ್ತಾರೆ. ಇದರಲ್ಲಿ ಏನಾಗುತ್ತದೆ ಎಂದರೆ, ಯಾವುದನ್ನು ಜಾಸ್ತಿ ಹೇಳುತ್ತಾರೆ ಎಂದರೆ... ಹೇಗೆ ವೃಕ್ಷವು ವಿಸ್ತಾರವಾಗುತ್ತದೆ ಮತ್ತು ಅದರ

ಬೀಜವು ಅಡಗಿ ಹೋಗುತ್ತದೆ. ಅವರು ತಿಳಿಯುತ್ತಾರೆ ನಾವು ತಿಳಿಸುವುದಕ್ಕಾಗಿ ವಿಸ್ತಾರ ಮಾಡುತ್ತಿದ್ದೇವೆ ಎಂದು ಆದರೆ ವಿಸ್ತಾರದಲ್ಲಿ ಯಾವ ಮಾತನ್ನು ನೀವು ತಿಳಿಸಲು ಬಯಸುತ್ತಿದ್ದೀರೋ ಅದರ ಸಾರವು ಅಡಗಿ ಹೋಗುತ್ತದೆ ಹಾಗೂ ಮಾತು, ವಾಣಿಯ ಶಕ್ತಿಯು ಇರುತ್ತದೆ ಮತ್ತು ವ್ಯರ್ಥ ಮಾತೂ ಇರುತ್ತದೆ ಎಂದರೆ ವಾಣಿಯ ಶಕ್ತಿಯು ಕಡಿಮೆಯಾಗಿ ಬಿಡುತ್ತದೆ. ಜಾಸ್ತಿ ಮಾತನಾಡುವವರ ಬುದ್ಧಿಯ ಶಕ್ತಿಯು ಸಹ ಕಡಿಮೆಯಾಗಿ ಹೋಗುತ್ತದೆ. ಶಾರ್ಟ್ ಹಾಗೂ ಸ್ವೀಟ್ (ಚಿಕ್ಕದಾಗಿ ಹಾಗೂ ಮಧುರವಾಗಿ) ಈ ಎರಡು ಶಬ್ದಗಳನ್ನು ನೆನಪಿಟ್ಟುಕೊಳ್ಳಿರಿ. ಬೇರೆ ಯಾರಾದರೂ ಹೇಳುತ್ತಿದ್ದರೆ ಅವರಿಗೂ ನಮಗೆ ಇಷ್ಟೊಂದು ಕೇಳಲು ಸಮಯವಿಲ್ಲ ಎಂದು ಹೇಳುತ್ತೀರಿ. ಆದರೆ ಸ್ವಯಂ ಹೇಳುವಾಗ ಸಮಯವನ್ನು ಮರೆತು ಹೋಗುತ್ತೀರಿ. ಆದ್ದರಿಂದ ನಿಮ್ಮ ಖಜಾನೆಯ ಸ್ಟಾಕ್‌ಅನ್ನು ಜಮಾ ಮಾಡಿಕೊಳ್ಳಿ. ಸಂಕಲ್ಪದ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ, ಮಾತಿನ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ, ಶಕ್ತಿಗಳ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ, ಸಮಯದ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ, ಗುಣಗಳ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ. ಪ್ರತಿದಿನ ರಾತ್ರಿ ತಮ್ಮ ಈ ಖಜಾನೆಗಳ ಉಳಿತಾಯದ ಲೆಕ್ಕಪತ್ರವನ್ನು ಎಷ್ಟು ಸಂಕಲ್ಪ ವ್ಯರ್ಥದ ಬದಲಾಗಿ ಸಮರ್ಥದ  ಖಾತೆಯಲ್ಲಿ ಜಮಾ ಮಾಡಿದೆ ಎಂದು ಪರಿಶೀಲಿಸಿಕೊಳ್ಳಿರಿ? ಎಷ್ಟು ಸಮಯ ಸಮರ್ಥದ ಖಾತೆಯಲ್ಲಿ ಜಮಾ ಮಾಡಿದೆ? ಗುಣ ಹಾಗೂ ಶಕ್ತಿಗಳಿಂದ ಎಷ್ಟು ಶ್ರೇಷ್ಠ ಕಾರ್ಯವನ್ನು ಮಾಡಿದೆ? ಗುಣವನ್ನು ಎಷ್ಟು ಕಾರ್ಯದಲ್ಲಿ ತೊಡಗಿಸಿದೆ? ಶಕ್ತಿಗಳನ್ನು ಕಾರ್ಯದಲ್ಲಿ ತೊಡಗಿಸಿದ್ದೇನೇ? ಇದಾಗಿದೆ ಜಮಾ ಮಾಡುವುದು. ಹಾಗಾದರೆ ಎಲ್ಲಾ ಸಂಕಲ್ಪ, ಸಮಯ, ಗುಣ, ಶಕ್ತಿಗಳ ಲೆಕ್ಕಪತ್ರವನ್ನು ಪ್ರತಿದಿನ ರಾತ್ರಿ ಪರಿಶೀಲನೆ ಮಾಡಿ ಹಾಗೂ ಟೋಟಲ್ ಮಾಡಿ ಎಷ್ಟು ಉಳಿತಾಯದ ಖಾತೆ ಜಮಾ ಆಯಿತು? ಈ ಉಳಿತಾಯ ಸ್ವಯಂಗೂ ಸಹ ಸಹಯೋಗ ಕೊಡುತ್ತಾ ಇರುತ್ತದೆ ಹಾಗೂ ಅನ್ಯರಿಗೂ ಕೊಡುತ್ತದೆ. ತಿಳಿಯಿತೇ ಏನು ಮಾಡಬೇಕು ಎಂದು? ಎಲ್ಲರೂ ಕೇಳುತ್ತಿರಿ ಅಲ್ಲವೇ ಏನು ಮಾಡಬೇಕು? ಎಂದು ಹಾಗಾದರೆ ಈಗ ಇದನ್ನು ಮಾಡಬೇಕು. ಗ್ರೀಟಿಂಗ್ಸ್(ಶುಭಾಶಯ)ಗಳನ್ನು ತೆಗೆದುಕೊಳ್ಳಬೇಕು, ಉಡುಗೊರೆಯನ್ನು ಕೊಡಬೇಕು, ಜಮಾ ಸಹ ಮಾಡಬೇಕು ಹಾಗೂ ಪರಿಶ್ರಮವನ್ನು ಬಿಡಬೇಕು. ಯಾವಾಗ ಉಳಿತಾಯದ ಮೇಲೆ ಗಮನವನ್ನು ಕೊಡುವಿರೋ ಆಗ ಪರಿಶ್ರಮ ಪಡುವ ಅವಶ್ಯಕತೆ ಇರುವುದಿಲ್ಲ. ಪರಿಶ್ರಮ ಮುಕ್ತ ವರ್ಷವನ್ನು ವಿಜೃಂಭಣೆಯಿಂದ ಆಚರಿಸಿ. ವ್ಯರ್ಥ ಹಾಗೂ ನಕಾರಾತ್ಮಕತೆಗಳ ಮುಕ್ತ ವರ್ಷವನ್ನು ಆಚರಿಸಿ. ಬಾಪ್‌ದಾದಾರವರು ಮುಕ್ತಿ ವರ್ಷದ ಫಲಿತಾಂಶವನ್ನು ಈಗಲೇ ಕೇಳುತ್ತಿಲ್ಲ, ಬಾಪ್‌ದಾದಾರವರಿಗೆ ನೆನಪಿದೆ. ಫಲಿತಾಂಶವನ್ನು ತೆಗೆದುಕೊಳ್ಳುವರು- ಎಷ್ಟು ಜನ ಮುಕ್ತಿ ವರ್ಷವನ್ನು ಆಚರಿಸಿದರು ಅಥವಾ ತಿಂಗಳುಗಳನ್ನು ಆಚರಿಸಿದರು? ಆರು ತಿಂಗಳು ಆಚರಿಸಿದರೂ, ಅರ್ಧ ಆಚರಿಸಿದರೂ, ಪೂರ್ಣ ಆಚರಿಸಿದರೂ- ಎಲ್ಲರ ಲೆಕ್ಕವನ್ನು ತೆಗೆದುಕೊಳ್ಳುತ್ತೇವೆ? ಒಳ್ಳೆಯದು.

ಡಬಲ್ ವಿದೇಶಿಯರು ಚೆನ್ನಾಗಿ ಆಚರಿಸಿಕೊಂಡಿದ್ದಿರಲ್ಲವೇ?  ಭಾರತವಾಸಿಯರೂ ಸಹ ಆಚರಿಸಿಕೊಂಡಿದ್ದಾರೆ. ಫಲಿತಾಂಶವನ್ನು 18ನೇ ದಿನಾಂಕದಂದು ಹೇಳುತ್ತೇನೆ. ಇಡೀ ವರ್ಷ ಆಚರಿಸಿಕೊಂಡವರಿಗೆ ಏನು ಉಡುಗೊರೆಯನ್ನು ಕೊಡುತ್ತೀರಿ? ದಾದಿಯರು ಹೇಳಿರಿ? ಇಡೀ ವರ್ಷ ಮುಕ್ತಿ ವರ್ಷವನ್ನಾಗಿ ಆಚರಿಸಿಕೊಂಡವರಿಗೆ ಏನನ್ನು ಕೊಡುತ್ತೀರಿ. ಶುಭಾಶಯಗಳು, ಆಶೀರ್ವಾದಗಳನ್ನಂತೂ ಕೊಡುತ್ತಿರಿ. ಒಳ್ಳೆಯದೇ ಆದರೆ ಸ್ಮೃತಿ ಚಿಹ್ನೆಯಾಗಿ ಏನನ್ನು ಕೊಡುತ್ತೀರಿ?

ಉಡುಗೊರೆಯನ್ನು ತಯಾರು ಮಾಡಿ ಇಡಿ. ಎಷ್ಟು ಜನ ಬಹುಮಾನವನ್ನು ಪಡೆಯುತ್ತಾರೆಯೋ ನೋಡುತ್ತೇನೆ. ಹೊಸ ವರ್ಷ, ಹೊಸ ಉತ್ಸಾಹ, ಹೊಸ ಧೈರ್ಯ, ಎಲ್ಲವೂ ಹೊಸವೇ. ಈ ಘಳಿಗೆಯಲ್ಲಿ ಇರುವ ಸ್ಥಿತಿಗಿಂತಲೂ ನಂತರದ ಘಳಿಗೆಯಲ್ಲಿ ಇನ್ನೂ ಉನ್ನತವಾದ ಸ್ಥಿತಿ ಇರಬೇಕು. ಒಳ್ಳೆಯದು ಇಂದು 12ಗಂಟೆಯವರೆಗೂ ಕುಳಿತುಕೊಳ್ಳಬೇಕು ಆದ್ದರಿಂದಲೇ ಎಲ್ಲರೂ ಎಲ್ಲಾ ಕಡೆಯಿಂದ ಓಡೋಡಿ ಬಂದಿದ್ದೀರಿ. ಹೊಸ ವರ್ಷವನ್ನು ಆಚರಿಸಿಕೊಳ್ಳಬೇಕೆಂದು ಬಂದಿದ್ದೀರಿ. ಒಳ್ಳೆಯದು.  ಹೊಸಬರು, ಹಳಬರು ಯಾರಾದರೆ ಬಂದಿದ್ದೀರೋ ಒಬ್ಬರಿನ್ನೊಬ್ಬರಿಗೆ ಮನಸ್ಸಿನಿಂದ ಶುಭಾಶಯಗಳನ್ನು ಹೇಳಿಕೊಳ್ಳುತ್ತಿದ್ದೀರಿ. ಬನ್ನಿರಿ ಸುಸ್ವಾಗತ! ಶಾಂತಿವನದ ಅಲಂಕರಣೆ ನೀವೇ, ಬನ್ನಿ ಈ ಹಾಲ್ ಎಷ್ಟು ಅಲಂಕರಿಸಲ್ಪಟ್ಟಿದೆಯೋ ನೋಡಿರಿ. ಅಲಂಕರಿಸಿದವರು ಯಾರು? ನೀವೇ ತಾನೇ? ಒಳ್ಳೆಯದು. ಇಂದು ಬಾಪ್‌ದಾದಾ ಪ್ರತಿಯೊಂದು ಗ್ರೂಪ್ ನೊಂದಿಗೆ, ಎಲ್ಲಿ ಕುಳಿತಿದ್ದಾರೆಯೋ ಅಲ್ಲಿಯೇ ನಿಲ್ಲಿಸಿ ಮಿಲನ ಮಾಡಿಸಿಕೊಳ್ಳುತ್ತಿದ್ದಾರೆ. ಡಬಲ್ ವಿದೇಶಿಯರಾದರೂ,  ಭಾರತವಾಸಿಯರಾದರೂ ಪ್ರತಿ ಝೋನ್ ಗೆ, ಒಂದೊಂದು ಜೋನ್ ನೊಂದಿಗೆ ತಂದೆ ಮಿಲನ ಮಾಡಿಕೊಳ್ಳುತ್ತಿದ್ದಾರೆ. ಆದರೆ ಸ್ಟೇಜ್ ನ ಮೇಲೆ ಬರಬೇಡಿ ಅಲ್ಲೇ ನಿಂತುಕೊಂಡು ಮಿಲನವನ್ನು ಆಚರಿಸಿ, ಇದು ಸಹ ಹೊಸ ವಿಷಯವಲ್ಲವೇ? ಹೊಸ ವರ್ಷವನ್ನು ಆಚರಿಸಿಕೊಳ್ಳಲು ಬಂದಿದ್ದೀರಿ ಆದ್ದರಿಂದ ಇದು ಕೂಡ ಹೊಸ ವಿಷಯ, ಒಳ್ಳೆಯದು.

**ನಾಲ್ಕಾರು ಕಡೆಯ ಅತಿ ಸ್ನೇಹಿ ಸಮೀಪ ಬ್ರಾಹ್ಮಣ ಆತ್ಮರಿಗೆ ನವಯುಗದ ರಚಯಿತರವರ ಶುಭಾಶಯಗಳು, ಶುಭಾಶಯಗಳು, ಶುಭಾಶಯಗಳು. ಇದು ಬೀಳ್ಕೊಡುಗೆಯ ಹಾಗೂ ಶುಭಾಶಯಗಳ ಸಮಯವಾಗಿದೆ, ಸಂಗಮವಾಗಿದೆ. ಹಳೆಯ ವರ್ಷಕ್ಕೆ ಬೀಳ್ಕೊಡುಗೆ, ಹಳೆಯ ವರ್ಷದ ಜೊತೆಗೆ ಹಳೆಯ ವಿಷಯಗಳು, ಹಳೆಯ ಸಮಸ್ಯೆಗಳು, ಹಳೆಯ ಸಂಸ್ಕಾರ ಎಲ್ಲದಕ್ಕೂ ಬೀಳ್ಕೊಡುಗೆಗಳು ಹಾಗೂ ಹೊಸ ಉತ್ಸಾಹ ಉಲ್ಲಾಸ ಸಂಪನ್ನ ವರ್ಷಕ್ಕೆ ಅಭಿನಂದನೆಗಳು ಹಾಗೂ ಶುಭಾಶಯಗಳು. ಈ ವರ್ಷವನ್ನು ಸದಾ ಪರಿಶ್ರಮ ಮುಕ್ತ ವರ್ಷವನ್ನಾಗಿ ಆಚರಿಸಿ ಈ ವರ್ಷವನ್ನು ಸದಾ ಸ್ವ ಹಾಗೂ ಸರ್ವರ ನಿರ್ವಿಘ್ನ ಭವದ ವರದಾನದಿಂದ ಆಚರಿಸಿ. ಈ ವರ್ಷದಲ್ಲಿ ಪ್ರತಿಯೊಬ್ಬರೂ  ಬಾಪ್‌ದಾದಾರವರು ಹಾಗೂ ದಾದಿಯರ ಮುಖಾಂತರ ನಂಬರ್‌ವನ್‌ನಲ್ಲಿ ಹೋಗುವಂತಹ ಉಡುಗೊರೆ ಹಾಗೂ ಗಿಫ್ಟನ್ನು ತೆಗೆದುಕೊಳ್ಳಬೇಕು. ಇದಕ್ಕಾಗಿ ಎಲ್ಲಾ ವಿದೇಶದವರು ಹಾಗೂ ಭಾರತ ವಾಸಿಯರು ನಂಬರ್‌ವನ್ ನಿಶ್ಚಯವನ್ನು ಇಟ್ಟುಕೊಂಡು ಮುಂದುವರೆಯಬೇಕು ಹಾಗೂ ಮುಂದುವರಿಸಬೇಕು. ಹಾಗಾದರೆ ಬಹಳ ಬಹಳ ನೆನಪು ಪ್ರೀತಿಯ ಸಹಿತ ಎಲ್ಲಾ ಪ್ರಕಾರದ, ಮನಸಾ, ವಾಚ ಎಲ್ಲಾ ರೂಪದಿಂದ ಪದಮ ಪದಮದಷ್ಟು ಶುಭಾಶಯಗಳನ್ನು ಕೊಡುತ್ತಿದ್ದಾರೆ. ಈಗ ಒಂದು ಸೆಕೆಂಡಿನಲ್ಲಿ ಶಕ್ತಿಶಾಲಿ ಸಂಕಲ್ಪದಿಂದ, ದೃಢತೆಯಿಂದ ಹಳೆಯ ವಸ್ತುಗಳಿಗೆ, ಹಳೆಯ ವರ್ಷಕ್ಕೆ ಹಳೆಯ ವಿಷಯಗಳಿಗೆ ಸದಾ ಕಾಲಕ್ಕಾಗಿ ಬಿಳ್ಕೊಡುಗೆಯನ್ನು ಕೊಡಿ. ಒಂದು ಕ್ಷಣ ಎಲ್ಲರೂ- ದೃಢತೆ ಸಫಲತೆಯಾಗಿದೆ, ಈ ದೃಢ ಸಂಕಲ್ಪದಲ್ಲಿ ಸ್ಥಿತರಾಗಿ ಬಿಡಿ. ಒಳ್ಳೆಯದು. ಓಂ ಶಾಂತಿ.**

ರಿವೈಸ್ ಕೋರ್ಸ್ 31-12-1998.

***ಈ ಹೊಸ ವರ್ಷದಲ್ಲಿ ಧೈರ್ಯದ ಆಧಾರದ ಮೇಲೆ ಸ್ವಯಂ ಅನ್ನು ಪರಿಶ್ರಮಮುಕ್ತ, ಸದಾ ವಿಜಯಯಾಗಿ ಅನುಭವ ಮಾಡಿಕೊಳ್ಳಿರಿ.***

ಸರ್ವ ಖಜಾನೆಯ ಸ್ಟಾಕ್ ಅನ್ನು ಜಮಾ ಮಾಡಿಕೊಳ್ಳಿರಿ, ಸಂಕಲ್ಪದ ಖಜಾನೆ, ಮಾತಿನ ಖಜಾನೆ, ಶಕ್ತಿಗಳ ಖಜಾನೆ, ಸಮಯದ ಖಜಾನೆ, ಗುಣದ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ. ಪ್ರತಿದಿನ ರಾತ್ರಿ ತಮ್ಮ ಖಜಾನೆಗಳ ಉಳಿತಾಯದ ಲೆಕ್ಕಪತ್ರವನ್ನು ಅರ್ಥಾತ್ ಎಷ್ಟು ಸಮರ್ಥ ಮತ್ತು ಎಷ್ಟು ವ್ಯರ್ಥದ ಖಾತೆ ಇದೆ ಎಂದು ಪರಿಶೀಲಿಸಿಕೊಳ್ಳಿರಿ. ಯಾವಾಗ ಉಳಿತಾಯದ ಖಾತೆಯ ಮೇಲೆ ಗಮನವನ್ನು ಇಡುವಿರೋ ಆಗ ಪರಿಶ್ರಮ ಪಡುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಪರಿಶ್ರಮ ಮುಕ್ತ ವರ್ಷವನ್ನು ವಿಜೃಂಭಣೆಯಿಂದ ಆಚರಿಸಿ ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನಗೆ ಈ ವರ್ಷದಲ್ಲಿ ಸ್ವ ಪರಿವರ್ತನೆಯಲ್ಲಾಗಲಿ, ಸೇವೆಯ ಸಫಲತೆಯಲ್ಲಾಗಲಿ, ಶುಭ ಭಾವನೆ ಶುಭಕಾಮನೆಯಿಂದ ಪ್ರತಿಯೊಬ್ಬ ಆತ್ಮನನ್ನು ಪರಿವರ್ತನೆ ಮಾಡುವುದರಲ್ಲಿ ಉತ್ಸಾಹ, ಉಲ್ಲಾಸದೊಂದಿಗೆ ಧೈರ್ಯವೂ ಇದೆ.

2. ಧೈರ್ಯವಂತನಾದ ನನಗೆ ಬಾಪ್‌ದಾದಾ ಸಹ ಒಂದು ಸಂಕಲ್ಪದ ಪದಮಾ ಪದಂ ಸಹಾಯವನ್ನು ಮಾಡುತ್ತಿದ್ದಾರೆ.

3. ನಾನು ಧೈರ್ಯದಿಂದ ಹಾರುವ ಯುಗ, ವರದಾನಿ ಯುಗ, ಪುರುಷೋತ್ತಮ ಯುಗ, ಸ್ವಯಂ ವಿದಾತನಿಂದ ಸರ್ವ ಶಕ್ತಿಗಳನ್ನು ವಾರಸತ್ವವಾಗಿ ಸಹಜವಾಗಿ ಪ್ರಾಪ್ತಿಸಿಕೊಳ್ಳುವ ಯುಗವನ್ನು ಆಚರಿಸಿಕೊಂಡಿದ್ದೇನೆ.

4. ಶ್ರೇಷ್ಠ ಬ್ರಾಹ್ಮಣಾತ್ಮನಾದ ನನಗೆ ಸಫಲತೆ ನನ್ನ ಜನ್ಮ ಸಿದ್ಧ ಅಧಿಕಾರವಾಗಿದೆ. ಎಂಬ ಸ್ಮೃತಿಯ ಪ್ರತ್ಯಕ್ಷ ಸ್ವರೂಪವಾಗಿದ್ದೇನೆ.

5. ನಾನು ಪ್ರತಿಯೊಂದು ಕಾರ್ಯದಲ್ಲಿ ನಿಶ್ಚಯ ಬುದ್ಧಿ ವಿಜಯಂತಿ ಸ್ವರೂಪ.

6. ನಾನು ಮಾಸ್ಟರ್ ಸರ್ವಶಕ್ತಿವಂತನು.

7. ನಾನು ಅನೇಕ ಬಾರಿ ವಿಜಯೀ ಆಗಿರುವ ವಿಜಯೀ ಸ್ವರೂಪ.

8. ನಾನು ಮಾಯಾಜಿತ್ ಸ್ವರೂಪ.

9. ನಾನು ಕರ್ಮ ಮಾಡುತ್ತಲೂ ವಿಜಯೀ ಸ್ಥಿತಿಯ ಆತ್ಮಿಕ ನಶೆ ಇರುತ್ತದೆಯೇ ಎಂದು ಮಧ್ಯ ಮಧ್ಯದಲ್ಲಿ ಪರಿಶೀಲಿಸಿಕೊಂಡು ಪರಿವರ್ತನೆ ಮಾಡಿಕೊಳ್ಳುತ್ತಿದ್ದೇನೆ.

10. ನಾನು ಅಶುಭವನ್ನು, ವ್ಯರ್ಥವನ್ನು ಸಮರ್ಥದಲ್ಲಿ ಪರಿವರ್ತನೆ ಮಾಡಿ ಸಂಕಲ್ಪದಲ್ಲಿ, ಮನಸ್ಸಿನಲ್ಲಿಯೂ ಪರಿಶ್ರಮದಿಂದ ಮುಕ್ತವಾಗಿ ಈ ಹೊಸ ವರ್ಷವನ್ನು ಪರಿಶ್ರಮ ಮುಕ್ತ ವರ್ಷವನ್ನಾಗಿ ಆಚರಿಸಿಕೊಳ್ಳುತ್ತಿದ್ದೇನೆ.

11. ನಾನು ಧೈರ್ಯದಲ್ಲಿ, ನಿಶ್ಚಯದಲ್ಲಿ ಮತ್ತು ನಶೆಯಲ್ಲಿ ಅಮರ ಭವ! ಎಂಬ ತಂದೆಯ ವರದಾನದ ವರದಾನಿಯಾಗಿದ್ದೇನೆ.

12. ನಾನು ಧಿಲ್ ಖುಷ್ ಮಿಠಾಯಿಯನ್ನು (ಮನಸ್ಸಿನ ಖುಷಿಯೆಂಬ ಮಿಠಾಯಿ) ಎಲ್ಲರಿಗೂ ಹಂಚುವ ಅಜ್ಞಾಕಾರಿ ಆಗಿದ್ದೇನೆ.

13. ನಾನು ತಂದೆಯ ಜೊತೆ ಹೋಗಲು ಎವರ್ ರೆಡಿ ಹಾಗೂ ಎವರೆ ಹ್ಯಾಪಿಯಾಗಿರುವ ಫರಿಶ್ತಾ ಸ್ವರೂಪ.

14. ನಾನು ನನ್ನ ಸಂಬಂಧ ಸಂಪರ್ಕದಲ್ಲಿ ಬರುವವರಿಗೆ ಶಕ್ತಿಯ ಸಹಾಯ, ಶಕ್ತಿಯ ವೈಬ್ರೇಶನ್ಸ್, ನನ್ನ ಮುಖ ಮತ್ತು ನಡವಳಿಕೆಯಿಂದ ಗುಣಗಳ ಉಡುಗೊರೆಯನ್ನು, ಶುಭ ಭಾವನೆ ಮತ್ತು ಶುಭಕಾಮನೆ ಎಂಬ ಉಡುಗೊರೆಯನ್ನು ಕೊಡುವ ಉದಾರ ಹೃದಯ ಸ್ವರೂಪ.

15. ನಾನು ವೃತ್ತಿಯಿಂದ ಇತರರ ಅಶುಭ(ನಕಾರಾತ್ಮಕ) ಪ್ರಕಂಪನ, ಅಶುಭ ನಡವಳಿಕೆ, ಅಶುಭ ಮಾತುಗಳನ್ನೂ, ಶುಭದಲ್ಲಿ(ಸಕಾರಾತ್ಮಕ) ಪರಿವರ್ತನೆ ಮಾಡಿ, ಶುಭ ಭಾವನೆ, ಶುಭಕಾಮನೆಯ ಉಡುಗೊರೆಯನ್ನು ಕೊಡುವ ವಿಶ್ವ ಪರಿವರ್ತಕನು, ಮಾಸ್ಟರ್ ದಾತನು.

16. ಈಗ ವಿಶ್ವ ಪರಿವರ್ತಕನಾದ ನಾನು ಭವಿಷ್ಯದಲ್ಲಿ ವಿಶ್ವ ರಾಜ್ಯಾಧಿಕಾರಿ.

17. ನಾನು ಸಂಬಂಧ ಸಂಪರ್ಕಗಳಲ್ಲಿ ರತ್ನಗಳ ಸಮಾನವಾದ ಮಾತುಗಳನ್ನಾಡಿ, ಶ್ರೇಷ್ಠ ಸಂಕಲ್ಪಗಳನ್ನು ಮಾಡಿ, ಅವರ ಬಾಯಿಂದ, ಮನಸ್ಸಿನಿಂದ ಶುಭಾಶಯಗಳು ಅಥವಾ ಆಶೀರ್ವಾದಗಳನ್ನು ಪಡೆದಿದ್ದೇನೆ.

18. ನಾನು ಪ್ರತಿಯೊಂದು ವಿಷಯವನ್ನು ಚಿಕ್ಕದಾಗಿ ಮತ್ತು ಮಧುರವಾಗಿ (ಶಾರ್ಟ್ & ಸ್ವೀಟ್ಆಗಿ) ಮಾತನಾಡುತ್ತಿದ್ದೇನೆ.

19. ನಾನು ಸಂಕಲ್ಪಗಳನ್ನು, ಮಾತನ್ನು, ಸಮಯವನ್ನು, ಗುಣಗಳನ್ನು, ಶಕ್ತಿಯ ಖಜಾನೆಯನ್ನು ಎಷ್ಟು ಉಳಿತಾಯ ಮಾಡಿದ್ದೇನೆ ಎಂದು ಪ್ರತಿದಿನ ರಾತ್ರಿ ನನ್ನ ಖಾತೆಯನ್ನು ಪರಿಶೀಲಿಸಿಕೊಳ್ಳುತ್ತಿದ್ದೇನೆ.